1	2	3
10.	ಮೆ. ಎಸ್.ಎಲ್.ಎನ್.ಸ್ಟೋನ್ ಕ್ರಷಿಂಗ್ ಅಂಡ್ ಬ್ರಿಕ್ ವರ್ಕ್ಸ್, ಹನಮಂತರಾಯಪ್ಪ ಬಿನ್ ಲೇ ಚಿಕ್ಕಹನುಮಯ್ಯ ಶೆಟ್ಟಿಪಾಳ್ಯ, ಗರ್ಗೇಶ್ವರ ಪುರ ಸೋಲೂರು ಹೋಬಳಿ, ಮಾಗಡಿ ತಾ:	08:20:ಬಿ-00522:ಪಿಆರ್ಓವಿ: ಎಸ್ಎಸ್ಐ ದಿನಾಂಕ : 8-7-96 ಘಟಕ : ಸ.ನಂ.72, ಗರ್ಗೇಶ್ವರಪುರ
11.	ಮೇ. ಆಶಾ ಗ್ರಾನೈಟ್ಸ್ ಕ್ರಷರ್ಸ್ ಬಿ.ಪಿ. ರಮೇಶ ಬಿನ್.ಬಿ. ಪುಟ್ಟಮಾರಯ್ಯ ನಂ. 3083, ಸುಬಾಶ್ನಗರ, ನೆಲಮಂಗಲ	08:20:ಬಿ-00508:ಪಿಆರ್ಓವಿ: ಎಸ್ಎಸ್ಐ ದಿನಾಂಕ : 27-6-96 ಘಟಕ : 35:2, ಬಸವನಹಳ್ಳಿ, ಮಾಗಡಿ ತಾ:

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ದೇವಸ್ಥಾನಗಳಿಗೆ ಹಣ ಬಿಡುಗಡೆ

603 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ದೇವಸ್ಥಾನಗಳ ದುರಸ್ಥಿ, ನವೀಕರಣ ಮತ್ತು ಪುನರ್ ನಿರ್ಮಾಣಕ್ಕೆ1994-95, 1995-96, 1996-97 ಮತ್ತು1997-98ರ ಸಾಲಿನಲ್ಲಿ ಬಿಡುಗಡೆ ಆದ ಹಣವೆಷ್ಟು?*

ಆ) *ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ವರ್ಷ	
1994-95	2,00,000-00
1995-96	1,60,000-00
1996-97	60,000-00
1997-98	ಈ ಸಾಲಿಗೆ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುವ ಹಂತದಲ್ಲಿದೆ.

ಆ) (ವಿವರದ ಪಟ್ಟಿ ಲಗತ್ತಿಸಿ).

ಅನುಬಂಧ

ವಿರಾಜಪೇಟೆ ತಾಲ್ಲೂಕು :

1994-95

1)	ಶ್ರೀ ಮಹಾದೇವರ ದೇವಸ್ಥಾನ, ತಾವಳಗೇರಿ	ರೂ. 10,000-00
2)	ಶ್ರೀ ಅಯ್ಯಪ್ಪಸ್ವಾಮಿ ದೇ: ಅಮ್ಮಾಳ್	20,000-00
3)	ಶ್ರೀ ಬಸವೇಶ್ವರ ದೇ: ಮಡಿಕೆಬೀಡು	10,000-00
4)	ಶ್ರೀ ವಿಠ್ಠಲಮೂರ್ತಿ ದೇ: ಅಳೀಫಟ್ಟ	25,000-00
5)	ಶ್ರೀ ಮೃತ್ಯುಂಜಯ ದೇ: ತಿರಳು	20,000-00
6)	ಶ್ರೀ ಈಶ್ವರ ದೇ: ವಿರಾಜಪೇಟೆ ತಾ:	25,000-00
7)	ಶ್ರೀ ಈಶ್ವರ ದೇ: ದಾವಣಗೆರೆ	40,000-00
8)	ಶ್ರೀ ಮಹಾದೇಶ್ವರ ದೇ: ನಾಲ್ವೇರಿ ಗ್ರಾಮ	40,000-00
9)	ಶ್ರೀ ಗಣಪತಿ ದೇ: ನ್ಯೂ ಗ್ರಾಮ ತಿಥಿಮತಿ	10,000-00
		ಒಟ್ಟು - **2,00,000-00**

1995-96

1)	ಶ್ರೀ ಭದ್ರಕಾಳಿ ದೇ: ಮಗ್ಗುಲ ಗ್ರಾಮ	20,000-00
2)	ಶ್ರೀ ಈಶ್ವರ ದೇ: ಕೋಟ್ಟೋಳಿ ಗ್ರಾಮ	20,000-00
3)	ಶ್ರೀ ಚೌಡೇಶ್ವರಿ ದೇ: ಕ್ಯಾತಸಂದ್ರ	20,000-00
4)	ಶ್ರೀ ಉಮಾಮಹೇಶ್ವರ ದೇ: ಗೋಣಿಕೊಪ್ಪ	20,000-00
5)	ಶ್ರೀ ಕಾಲಭೈರವೇಶ್ವರ ದೇ: ಕಾಕೋಟು ಒರಂಬೀ	20,000-00
6)	ಶ್ರೀ ಭಗವತಿ ದೇ: ಕಾರಲು ಗ್ರಾಮ ಬೀರುನಾಣೆ	20,000-00
7)	ಶ್ರೀ ಭಗವತಿ ದೇ: ಪಾಲಂಪಾಲ ಗ್ರಾಮ	20,000-00
8)	ಶ್ರೀ ಕಂಚೀ ಕಾಮಾಕ್ಷಿ ದೇ: ಅರ್ಜಿ ಗ್ರಾಮ	20,000-00
		ಒಟ್ಟು - **1,60,000-00**

1996-97

1)	ಶ್ರೀ ಬಸವೇಶ್ವರ ದೇ: ಮಾಯದೂಡಿ ಮಡಿಬೇಡು	20,000-00
2)	ಶ್ರೀ ಈಶ್ವರ ದೇ: ತಿಥಿಮತಿನುಕ್ಯಾ ಗ್ರಾಮ	20,000-00
3)	ಶ್ರೀ ಭಗವತಿ ದೇ: ಹೆಗ್ಗಳ ಕಕ್ಕೆಕೋಡು	20,000-00
	ಒಟ್ಟು	**- 60,000-00**

ಮಾಗಡಿ ತಾಲ್ಲೂಕಿನಲ್ಲಿ ಆಶ್ರಯಮನೆಗಳಿಗೆ ಹಣ ಬಿಡುಗಡೆಯಾಗದಿರುವುದು

604 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಆಶ್ರಯ ಸಮಿತಿಯನ್ನು ಈವರೆವಿಗೂ ರಚಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ರಚಿಸಿದ್ದಲ್ಲಿ ಯಾವಾಗ ರಚಿಸಲಾಗುವುದು?

ಆ) ಮಾಗಡಿ ಟೌನಿನಲ್ಲಿ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳಲು ಈ ವರೆವಿಗೂ ಸರ್ಕಾರದ ಹಣ ಬಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಾರಣವೇನು?

ಇ) ಬಡ ಫಲಾನುಭವಿಗಳಿಗೆ ತೊಂದರೆಯಾಗಿರುವುದರಿಂದ ಈ ಹಣವನ್ನು ಶೀಘ್ರವೇ ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಮಾಗಡಿ ತಾಲ್ಲೂಕಿನಲ್ಲಿ ಆಶ್ರಯ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಸದಸ್ಯರ ಹೆಸರುಗಳು ಈ ಕೆಳಕಂಡಂತಿದೆ :

1) ಶ್ರೀ ಹೆಚ್.ಆರ್. ಕೆಂಪೇಗೌಡ ಬಿನ್ ರಾಮೇಗೌಡ

2) ಶ್ರೀ ಸಯ್ಯದ್ ಜಾಫರ್ (ನಯಾಜ್) ಬಿನ್ ಸಯ್ಯದ್ ಇಮಾಂಸಾಬ್

3) ಶ್ರೀಮತಿ ಚಿಕ್ಕಬೋರಮ್ಮ ಬಿನ್ ಜವರಯ್ಯ

ಆ) 1995-96ನೇ ಸಾಲಿನಲ್ಲಿ 128 ಮನೆಗಳನ್ನು ಮಂಜೂರು ಮಾಡಲಾಗಿದೆ. ಹುಡ್ಕೋ ಸಂಸ್ಥೆ ಸಾಲ ಮಂಜೂರು ಮಾಡಲು ವಿಳಂಬವಾದ್ದರಿಂದ ಹಣ ಬಿಡುಗಡೆಗೆ ನಿಧಾನವಾಗಿದೆ.

ಇ) ಶೀಘ್ರದಲ್ಲೇ ಹಣ ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ.

ಮಾಗಡಿ ತಾಲ್ಲೂಕಿನ ಕೆಂಪಸಾಗರದ ಬಳಿ ಅಕ್ರಮ ಗಣಿಗಾರಿಕೆ

605 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಕೆಂಪಸಾಗರದ ಬಳಿ ಎರಡು ಕಡೆ ಅಕ್ರಮವಾಗಿ ಕೆಂಪು ಕಲ್ಲು